ಶುಕ್ರವಾರ 05-09-2025 ಬೆಂಗಳೂರು ಬೆಲೆ: 5ರೂ, 4ಪಟಗಳು ಸಂಪುಟ 01-ಸಂಚಿಕೆ 37
Digital Varthe Kannada Daily Volume 01 - Issue 37 Friday 05-09-2025 Price: 5/- Rs 2 Pages Bengalore

# ಡಿಜಿಟಲ್ ವಾರ್ತೆ

DIGITAL VARTHE
www.digitalvarthe.com
digitalvarthe@gmail.com
ಕನ್ನಡಿಗರ ಶಕ್ತಿ
ಅಭಿಷೇಕ್ ಚಿಕ್ಕಮಾರನಹಳ್ಳಿ
ಸಂಪಾದಕರು
ಪುರುಷೋತ್ತಮ್ ಬಿ.ಹೆಚ್
ವ್ಯವಸ್ಥಾಪಕರು
RNI:KNKAN/25/A1348
ಕನ್ನಡ ದಿನಪತ್ರಿಕೆ

## ಮುಡಾ ಹಗರಣ, ಕಮಿಷನ್ ದಂಧೆ ಕುರಿತು ಸಂಪುಟದಲ್ಲಿ ಚರ್ಚೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮುಡಾ ಹಗರಣ, ಬಿಬಿಎಂಪಿ ಕಮಿಷನ್ ಭ್ರಷ್ಟಾಚಾರ ಸೇರಿದಂತೆ ಹಲವಾರು ಮಹತ್ವದ ವಿಷಯಗಳ ಚರ್ಚೆಯಾಗಿವೆ. ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 62 ಕ್ರಿಮಿನಲ್ ಮೊಕದ್ದಮೆ ಗಳನ್ನು ಅಭಿಯೋಜನೆಯಿಂದ ಹಿಂಪಡೆಯುವ ಬಗ್ಗೆ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ. ರೈತರು, ಕನ್ನಡಪರ ಸಂಘಟನೆಗಳು ಸೇರಿದಂತೆ ಹೋರಾಟಗಾರರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಗಳನ್ನು ಕೈಬಿಡುವ ಕುರಿತಂತೆ ಸಮಾಲೋಚನೆ ನಡೆಸಲಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯ ಕಾಮಗಾರಿಗಳ ಅವ್ಯವಹಾರ, ಭ್ರಷ್ಟಾಚಾರದ ಆರೋಪಗಳ ಕುರಿತು ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಆಯೋಗದ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿಂದು ಮಂಡಿಸಲಾಗಿದ್ದು, ಮುಂದಿನ ಕ್ರಮಗಳ ಬಗ್ಗೆ ಚರ್ಚೆಯಾಗಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆಯಲ್ಲಿನ ಆರೋಪಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಏಕಸದಸ್ಯ ವಿಚಾರಣಾ ಆಯೋಗವು ನೀಡಿರುವ ವರದಿಯ ಬಗ್ಗೆಯೂ ಚರ್ಚಿಸಲಾಗಿದೆ.

ಮುಡಾ ಹಗರಣ ರಾಜ್ಯದಲ್ಲಿ ಭಾರಿ ಸದ್ದು ಮಾಡಿತ್ತು. ಒಂದು ಹಂತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು. ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಅಕ್ರಮವಾಗಿ 13 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂಬ ಆರೋಪಗಳಿದ್ದವು. ಅದು ಒಂದೆಡೆಯಾದರೆ, ಮುಡಾದ ನಿವೇಶನ ಹಂಚಿಕೆಯಲ್ಲಿ ಭಾರೀ ಪ್ರಮಾಣದ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪಗಳ ಸಮಗ್ರ ತನಿಖೆಗೆ ಸಿದ್ದರಾಮಯ್ಯ ನ್ಯಾಯಾಂಗ ಆಯೋಗ ರಚಿಸಿದ್ದರು. ಅದರ ವರದಿ ಸಲ್ಲಿಕೆಯಾಗಿದ್ದು ಆ ಬಗ್ಗೆ ಸಂಪುಟದಲ್ಲಿ ಚರ್ಚಿಸಲಾಗಿದೆ. ಕೋವಿಡ್-19 ಸಂದರ್ಭದಲ್ಲಿ ಆಮ್ಲಜನಕ ಕೊರತೆಯಿಂದ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ 20ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು. ಆ ವೇಳೆ ವಿರೋಧಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ.ಶಿವಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಮೃತಪಟ್ಟವರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ವಿಶೇಷ ಪ್ರಕರಣವೆಂದು ಪರಿಗಣಿಸಿ ಕುಟುಂಬದ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರದ ಉದ್ಯೋಗ ನೀಡಲು ಒತ್ತಾಯಿಸಿದರು. ಆದರೆ ಬಿಜೆಪಿ ಸರ್ಕಾರ ಅದನ್ನು ಪರಿಗಣಿಸಿರಲಿಲ್ಲ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಈ ಹಿಂದೆ ತಾವು ಕೊಟ್ಟ ಮಾತಿನಂತೆ ನಡೆದುಕೊಳ್ಳಲು ಮುಂದಾಗಿದೆ. ಮೃತಪಟ್ಟವರ ಕುಟುಂಬದ ಅರ್ಹ ಅವಲಂಬಿತರಿಗೆ ಅನುಕಂಪ ಆಧಾರದ ಮೇಲೆ ಉದ್ಯೋಗ ಒದಗಿಸುವ ಬಗ್ಗೆ ಇಂದಿನ ಸಚಿವ ಪಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ.



## ಸೋಲೂರು ಹೋಬಳಿ ಮಾಗಡಿಯಿಂದ ನೆಲಮಂಗಲಕ್ಕೆ 68 ಗ್ರಾಮಗಳ ಸೇರ್ಪಡೆಗೆ ಕರಡು ಅಧಿಸೂಚನೆ

### ಜನಸಾಮಾನ್ಯರ ಆಡಳಿತಾತ್ಮಕ ಕೆಲಸ ಸುಗಮಗೊಳಿಸುವ ನಿಟ್ಟಿನಲ್ಲಿ ಗಡಿಬದಲಾವಣೆ

ನಾವು ಪ್ರತಿಯೊಂದು ಆಡಳಿತ ವಿಚಾರಕ್ಕೆ, ಜಮೀನು ದಾಖಲೆ ಪತ್ರಗಳಿಗೆ ಮಾಗಡಿಗೆ ಹೋಗಬೇಕಿತ್ತು, ಅಲ್ಲಿ ನಮ್ಮ ಮಾತು ಕೇಳೋರು ಯಾರು ಇಲ್ಲ, ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಆಗುತ್ತಿರಲಿಲ್ಲ. ಈಗ ನೆಲಮಂಗಲಕ್ಕೆ ಸೇರ್ಪಡೆಗೊಂಡಿರುವುದು ಸಾಕಷ್ಟು ಅನುಕೂಲ ಆಗಲಿದೆ, ರಾಜಕೀಯವಾಗಿ, ಆಡಳಿತಾತ್ಮಕವಾಗಿ, ಶೈಕ್ಷಣಿಕವಾಗಿ ಎಲ್ಲಾ ರೀತಿಯಲ್ಲೂ ನಮಗೆ ಅನುಕೂಲವಾಗಲಿದೆ.
**-ಹನುಮಂತಯ್ಯ, ವಕೀಲರು, ಲಕ್ಕೇನಹ**



ಸುಮಾರು 47 ವರ್ಷಗಳ ನಿರಂತರ ನರಕಯಾತನೆಗೆ ಇಂದು ಮುಕ್ತಿ ಸಿಕ್ಕಿದೆ, ಶಾಸಕರು ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾದರು ಸಹ ಅತ್ಯಂತ ಅನುಭವಿಯಂತೆ ಜನಾನುರಾಗೂ ಕೆಲಸಗನ್ನ ಮಾಡುತ್ತಿದ್ದಾರೆ. ಆಡಳಿತಾತ್ಮಕವಾಗಿ ನಮಗೆ ಸಾಕಷ್ಟು ಅನುಕೂಲ ಆಗಲಿದೆ. – **ಮೋಹನ್, ಪತ್ರಕರ್ತರು**



ಎರಡು ವಿಧಾನಸಭಾ ಕ್ಷೇತ್ರ ಮಾತ್ರವಲ್ಲ, ಎರಡು ಜಿಲ್ಲೆಗಳ ನಡುವೆ ಸಿಲುಕಿ ನೊಂದಿ ನರಳಿದ್ದ ಸೋಲೂರು ಜನರಿಗೆ ಇಂದಿಗೆ ಸೆರೆಮನೆ ವಾಸ ಅಂತ್ಯವಾಗಿದೆ. ಅಡಕತ್ತ-ರಿಯಲ್ಲಿ ಸಿಲುಕಿ ಅಭಿವೃದ್ಧಿ ಮರೀಚಿಕೆಯಾಗಿದ್ದ ಸೋಲೂರು ಹೋಬಳಿಗೆ ಇಂದು ನ್ಯಾಯ ದೊರೆತಿದೆ. ಒಂದು ನಗರ ಪ್ರದೇಶ ಹಾಗೂ ಮೂರು ಹೋಬಳಿ ಹೊಂದಿದ್ದ ನೆಲಮಂಗಲ ತಾಲೂಕಿಗೆ ಸೇರ್ಪಡೆ ಆಗುವ ಮೂಲಕ ನಾಲ್ಕು ಹೋಬಳಿಯೊಂದಿಗೆ ಭೂ ಪ್ರದೇಶ ವಿಸ್ತರಿಸುವುದರ ಮುಖೇನಾ ತಾಲೂಕಿನ ವಿಸ್ತೀರ್ಣ ಹೆಚ್ಚಳವಾಗಲಿದೆ.
**– ಸಿಎಂ ಗೌಡ, ಕಾಂಗ್ರೆಸ್ ಮುಖಂಡರು**




**ಬೇರ್ಪಟ್ಟು ನೆಲಮಂಗಲ ಸೇರ್ಪಡೆ ಆಡಳಿತಾತ್ಮಕ ಸೇವೆಗಳ ಸುಗಮತೆ ? ಸರ್ಕಾರದ ಉದ್ದೇಶ ಜನಗಣತಿ ಮುನ್ನ ಗಡಿ ನಿಗದಿಪಡಿಸುವ ಕಡ್ಡಾಯ ಕರಡು ಅಧಿಸೂಚನೆಗೆ ಕಾರ್ಯದರ್ಶಿಯವರ ಅನುಮೋದನೆ. ಸೇರ್ಪಡಿಗೊಳ್ಳಲಿರುವ 68 ಗ್ರಾಮಗಳು: ಸೋಲೂರು, ಕಲ್ಯಾಣಪುರ, ಸೋಲೂರು ಸರ್ಕಲ್, ತೂಬರಪಾಳ್ಯ, ಎಣ್ಣೆಗೇರೆ, ಚಿಕ್ಕನಹಳ್ಳಿ, ವಡ್ಡರಹಳ್ಳಿ, ಗಂಗೇನಪುರ, ಕನಕೆನಹಳ್ಳಿ, ಭೈರಾಪುರ, ಮಲ್ಲಿಕಾರ್ಜುನಪಾಳ್ಯ, ಲಕ್ಕೇನಹಳ್ಳಿ, ಬೀರವಾರ, ಕೊರಮಂಗಲ, ಕನ್ನಸಂದ್ರ, ಪರ್ವತನಪಾಳ್ಯ, ಗುಡೆಮಾರನಹಳ್ಳಿ, ಉಡುಕಂಟೆ, ಮೈಲನಹಳ್ಳಿ, ಪಾಲನಹಳ್ಳಿ, ಶಾಂತಪುರ, ಕಲ್ಲಹಟ್ಟಿಪಾಳ್ಯ, ಭೈರಸಂದ್ರ, ಮಾಲೂರು, ಭಂಟರಕುಪ್ಪೆ, ನಾಗನಹಳ್ಳಿ, ಮುಮ್ಮನಹಳ್ಳಿ, ಬೊಮ್ಮನಹಳ್ಳಿ, ತೊರೇಚನ್ನಹಳ್ಳಿ, ಮೋಟಗೊಂಡನಹಳ್ಳಿ, ಗೊಲ್ಲಹಳ್ಳಿ, ಕಾಟಗೊಂಡನಹಳ್ಳಿ, ಮರೇನಹಳ್ಳಿ, ಗರ್ಗೇಶ್ವರಪುರ, ಕೊಡಿಹಳ್ಳಿ, ಪೆಮ್ಮನಹಳ್ಳಿ, ಹಾಕ್ಕಿನಾಳು, ಮರಿಕುಪ್ಪೆ, ಬಸವೇನಹಳ್ಳಿ, ಹೊಸಹಳ್ಳಿ, ಬಾಣವಾಡಿ, ಆಲೂರು, ಶಿರಗನಹಳ್ಳಿ, ಮಲ್ಲಾಪುರ, ಮೂಗನಹಳ್ಳಿ, ಬಿಟ್ಟಸಂದ್ರ, ಹೇಮಾಪುರ, ನರಸಾಪುರ, ರಂಗೇನಹಳ್ಳಿ, ಕೆಂಪಾಪುರ, ತಟ್ಟೇಕೆರೆ, ಲಿಂಗನಹಳ್ಳಿ, ತಿಮ್ಮಸಂದ್ರ, ರಾಮನಹಳ್ಳಿ, ಗೋರೂರು, ರಂಗನಬೆಟ್ಟ, ಮುಪ್ಪೇನಹಳ್ಳಿ, ಚನ್ನಹಳ್ಳಿ, ಅರಿಶಿನಕಂಟೆ, ಉದ್ದಂದಳ್ಳಿ, ಚಿಕ್ಕಸೋಲೂರು, ಹ್ಯಾಗನಹಳ್ಳಿ, ಬೈದರಹಳ್ಳಿ, ಕುದ್ಲೂರು, ಸೋಮದೇವನಹಳ್ಳಿ, ಒಬ್ಬತ್ತನಕಂಟೆ, ಕುಪ್ಪೆಮಳ, ತಿರುಮಲಾಪುರ ಮತ್ತು ಹೊಸೂರು.**


ನೆಲಮಂಗಲ: ರಾಜ್ಯದ ಆಡಳಿತ ಇಲಾಖೆ ಮಹತ್ವದ ಹೆಜ್ಜೆ ಇಟ್ಟಿದ್ದು, ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿ ವ್ಯಾಪ್ತಿಯ 68 ಗ್ರಾಮಗಳನ್ನು ಬೇರ್ಪಡಿಸಿ, ಅವುಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿಗೆ ಸೇ-ರಿಸುವ ಕುರಿತು ಕರಡು ಅಧಿಸೂಚನೆ ಹೊರಡಿಸಿದೆ.

ಈ ನಿರ್ಧಾರಕ್ಕೆ ಕಾರ್ಯದರ್ಶಿಯವರ ಅನುಮೋದನೆ ಸಿಕ್ಕಿದ್ದು, ಜನಸಾಮಾನ್ಯರ ಆಡಳಿತಾತ್ಮಕ ಸೇವೆಗಳು ಸುಲಭಗೊಳ್ಳುವಂತೆ ಈ ಬದಲಾವಣೆ ಕೈಗೊಳ್ಳಲಾಗಿದೆ. 2026-27ರ ಜನಗಣತಿ ಕಾರ್ಯಕ್ಕೂ ಮುನ್ನ ಗ್ರಾಮ, ಹೋಬಳಿ, ತಾಲ್ಲೂಕು ಮತ್ತು ಜಿಲ್ಲೆಯ ಗಡಿಗಳನ್ನು ನಿಗದಿಪಡಿಸುವುದು ಕಡ್ಡಾಯವಾಗಿರುವುದ-ರಿಂದಲೇ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

**ಪರಿಣಾಮ:** ಸೋಲೂರು ಹೋಬಳಿ ಸೇರ್ಪಡೆಗೊಂಡ ಬಳಿಕ, ಮಾಗಡಿ ತಾಲ್ಲೂಕಿನ ಗಡಿ ಬದಲಾಗುತ್ತಿದ್ದು, ನೆಲಮಂಗಲ ತಾಲ್ಲೂಕಿನ ವ್ಯಾಪ್ತಿ ವಿಸ್ತರಿಸುತ್ತದೆ. ಜನತೆಗೆ ಹತ್ತಿರದ ತಾಲ್ಲೂಕು ಕೇಂದ್ರದಲ್ಲಿ ನೇರವಾಗಿ ಸೇವೆಗಳು ದೊರಕುವ ಸಾಧ್ಯತೆ ಹೆಚ್ಚಲಿದೆ.

**ಮುಂದಿನ ಹಂತ:** ಕರಡು ಅಧಿಸೂಚನೆಗೆ ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಲಾಗುತ್ತಿದ್ದು, ಅಂತಿಮ ಅನುಮೋದನೆ ನಂತರ ಗಡಿಬದಲಾವಣೆ ಜಾರಿಗೆ ಬರಲಿದೆ.


## ಜಿಎಸ್‌ಟಿ ಕಡಿತಗೊಳಿಸಿ ರಾಷ್ಟ್ರಕ್ಕೆ ಐತಿಹಾಸಿಕ ದೀಪಾವಳಿ ಉಡುಗೊರೆ: ಕುಮಾರಸ್ವಾಮಿ



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಜಿಎಸ್‌ಟಿ ಕಡಿತಗೊಳಿಸುವ ಮೂಲಕ ರಾಷ್ಟ್ರಕ್ಕೆ ಐತಿಹಾಸಿಕ ದೀಪಾವಳಿ ಉಡ-ುಗೊರೆ ನೀಡಿದ್ದಾರೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರಶಂಸಿಸಿದ್ದಾರೆ. ಈ ಸಂಬಂಧ ತಮ ಎಕ್?ಸ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯು ಮುಂದಿನ ಪೀಳಿಗೆಯ ಸುಧಾರಣೆಯನ್ನು ಅನುಮೋದಿಸಿದೆ. ಇದು ಜನಜೀವನ ಸುಲಭಗೊಳಿಸುವುದು ಮತ್ತು ಆತನಿರ್ಭರಭಾರತ್ ಅನ್ನು ಬಲಪಡಿಸುವ ಒಂದು ಪರಿವರ್ತನಾತಕ ಹೆಜ್ಜೆಯಾಗಿದೆ ಎಂದು ಬಣ್ಣಿಸಿದ್ದಾರೆ.

ಹೊಸ ಸುಧಾರಣೆಯೊಂದಿಗೆ ಜಿಎಸ್‌ಟಿ ಈಗ ಕೇವಲ ಎರಡು ಸ್ಲ್ಯಾಬ್‌ಗಳನ್ನು ಹೊಂದಿದ್ದು, ಅದು ಶೇ. 5 ಮತ್ತು ಶೇ.18 ರಷ್ಟಾಗಿರುತ್ತದೆ. ದೈನಂದಿನ ಜೀವನದ ಅಗತ್ಯ ವಸ್ತುಗಳು, ಆರೋಗ್ಯ ರಕ್ಷಣೆ, ಶಿಕ್ಷಣ, ಕೃಷಿ ಮತ್ತು ವಾಹನಗಳು ಸಹ ಸುಲಭವಾಗಿ ಕೈಗೆಟುಕುವಂತಾಗುತ್ತವೆ. ಜತೆಗೆ, ಉದ್ಯಮಗಳು ಹಾಗೂ ಎಂಎಸ್-ಎಂಇಗಳು ಭಾರೀ ಉತ್ತೇಜನವನ್ನು ಪಡೆಯುತ್ತವೆ ಎಂದು ಅವರು ಹೇಳಿದ್ದಾರೆ. ವ್ಯವಸ್ಥೆಯನ್ನು ಸರಳಗೊಳಿಸಿ ಮತ್ತಷ್ಟು ಸುಲಭಗೊಳಿಸುವ ಮತ್ತು ಭಾರತದಾದ್ಯಂತ ಪ್ರತೀ ಮನೆಗೂ ಸಂತೋಷ ಉಂಟು ಮಾಡುವ ನೈಜ ಜನಕೇಂದ್ರಿತ ಸುಧಾರಣೆ ಇದಾಗಿದೆ ಎಂದು ಅವರು ಶ್ಲಾಘಿಸಿದ್ದಾರೆ.

## ಸಮೀರ್ ನಿವಾಸದ ಮೇಲೆ ಬೆಳ್ತಂಗಡಿ ಪೊಲೀಸರ ದಾಳಿ



ಬೆಂಗಳೂರು: ಯೂ ಟ್ಯೂಬರ್ ಸಮೀರ್ ವಾಸವಾಗಿದ್ದ ಬನ್ನೇರುಘಟ್ಟದ ಹುಲ್ಲಹಳ್ಳಿಯ ಬಾಡಿಗೆ ಮನೆ ಮೇಲೆ ಬೆಳ್ತಂಗಡಿ ಪೊಲೀಸರು ಇಂದು ಮಧ್ಯಾಹ್ನ ದಾಳಿ ಮಾಡಿದ್ದಾರೆ. ಯೂ ಟ್ಯೂಬರ್ ಎಂಡಿ ಸಮೀರ್ ಬೆಳ್ತಂಗಡಿ ಪೊಲೀಸರಿಗೆ ಸರಿಯಾಗಿ ತನಿಖೆಗೆ ಸಹಕರಿಸದ ಹಿನ್ನೆಲೆಯಲ್ಲಿ ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆದು ಇನ್?ಸಪೆಕ್ಟರ್ ನಾಗೇಶ್ ಖದ್ರಿ ಮತ್ತು ಅವರ ತಂಡ ಎಫ್‌ಎಸ್‌ಎಲ್ ವಿಭಾಗದ ಸೋಕೋ ಸಿಬ್ಬಂದಿ ಜತೆ ಇಂದು ಮಧ್ಯಾಹ್ನ 1.30ರ ಸುಮಾರಿನಲ್ಲಿ ನಗರಕ್ಕೆ ಆಗಮಿಸಿ ಆತನ ಮನೆಯನ್ನು ಮಹಜರು ನಡೆಸಿದೆ.

ಪ್ರಕರಣದ ವಿಡಿಯೋ ಮಾಡಲು ಬಳಸಿದ ಕಂಪ್ಯೂಟರ್ ಮತ್ತು ಮೊಬೈಲ್‌ಅನ್ನು ಈಗಾಗಲೇ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬೆಳ್ತಂಗಡಿ ಪೊಲೀಸರು ಈಗಾಗಲೇ ಆತನನ್ನು ಎರಡು ಬಾರಿ ವಿಚಾರಣೆಗೊಳಪಡಿಸಿ ಮಾಹಿತಿ ಪಡೆದುಕೊಂಡಿದ್ದಾರೆ. ಬೆಳಗಿನಜಾವದವರೆಗೂ ಯೂಟ್ಯೂಬರ್ ವಿಚಾರಣೆ ಬೆಂಗಳೂರು, ಸೆ.4- ಧರ್ಮಸ್ಥಳದ ಸುತ್ತಮುತ್ತ ನೂರಾರು ಶವಗಳನ್ನು ಹೂಳಲಾಗಿದೆ ಎಂಬ ಬಗ್ಗೆ ಯೂಟ್ಯೂಬ್‌ನಲ್ಲಿ ಬಿತ್ತರವಾಗಿದ್ದ ವಿಡಿಯೋ ತುಣುಕುಗಳ ಸತ್ಯಾಸತ್ಯತೆಯ ಬಗ್ಗೆ ತನಿಖೆ ತೀವ್ರಗೊಳಿಸಿರುವ ಎಸ್‌ಐಟಿ ಯೂಟ್ಯೂಬರ್ ಒಬ್ಬರನ್ನು ರಾತ್ರಿಯಿಡೀ ವಿಚಾರಣೆಗೊಳಪಡಿಸಿ ಮಾಹಿತಿ ಪಡೆದುಕೊಂಡಿದೆ.

ಬೆಳ್ತಂಗಡಿ ಎಸ್‌ಐಟಿ ಕಚೇರಿಗೆ ನಿನ್ನೆ ಸಂಜೆ ದಾಖಲೆಗಳೊಂದಿಗೆ ಹಾಜರಾಗಿದ್ದ ಯು ಟ್ಯೂಬರ್ ಅಭಿಷೇಕ್‌ನನ್ನು ಇಂದು ಬೆಳಗಿನ ಜಾವ 4 ಗಂಟೆವರೆಗೂ ತನಿಖಾಧಿಕಾರಿ ಜಿತೇಂದ್ರಕುಮಾರ್ ದಯಾಮ ಅವರು ವಿಚಾರಣೆಗೊಳಪಡಿಸಿ ಹಲವು ಮಹತ್ವದ ವಿವರಗಳನ್ನು ಪಡೆದುಕೊಂಡಿದ್ದಾರೆ. ನೀವು ಯು ಟ್ಯೂಬ್‌ನಲ್ಲಿ ಪ್ರಸಾರ ಮಾಡಿರುವ ಅಂಶಗಳ ಮೂಲ ಎಲ್ಲಿಯದು, ಯಾವ ಮೂಲಗಳಿಂದ ಸಂಗ್ರಹಿಸಲಾಗಿದೆ. ಪ್ರಸಾರ ಮಾಡಿರುವ ಅಂಶಗಳಲ್ಲಿ ಸತ್ಯಾಸತ್ಯತೆ ಇದೆಯೇ ಎಂಬಿತ್ಯಾದಿ ವಿವರಗಳನ್ನು ತನಿಖಾಧಿಕಾರಿ ಪಡೆದುಕೊಂಡು ಇಂದು ಮತ್ತೆ ವಿಚಾರಣೆಗೆ ಹಾಜರಾಗುವಂತೆ ಹೇಳಿ ಅವರನ್ನು ಕಳುಹಿಸಿದ್ದಾರೆ. ಧರ್ಮಸ್ಥಳ ಸುತ್ತಮುತ್ತ ನೂರಾರು ಶವಗಳನ್ನು ಹೂಳಲಾಗಿದೆ ಎಂದು ಆರೋಪಿಸಿರುವ ಬುರುಡೆ ಚಿನ್ನಯ್ಯ ಹಾಗೂ ಅನನ್ಯ ಭಟ್ ಕಾಲ್ಪನಿಕದ ಸುಜಾತಾ ಭಟ್ ಅವರ ಬಗ್ಗೆ ವಿಡಿಯೋ ಮಾಡಿ ತನ್ನ ಯು ಟ್ಯೂಬ್‌ನಲ್ಲಿ ಅಭಿಷೇಕ್ ಪ್ರಸಾರ ಮಾಡಿದ್ದರು. ಬುರುಡೆ ಚಿನ್ನಯ್ಯನನ್ನು ನಿನ್ನೆ ಎಸ್‌ಐಟಿ ಅಧಿಕಾರಿಗಳು ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಲಯ ಮೂರು ದಿನಗಳ ಕಾಲ ಆತನನ್ನು ಎಸ್‌ಐಟಿ ಕಸ್ಟಡಿಗೆ ನೀಡಿದೆ.

## ಪಿಎಂಎಫ್‌ಎಂಇ ಯೋಜನೆಯಲ್ಲಿ ಕರ್ನಾಟಕದ ಅಭೂತಪೂರ್ವ ಪ್ರಗತಿ: ಸಚಿವ ಚಲುವರಾಯಸ್ವಾಮಿ

ಬೆಂಗಳೂರು: ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮ ಬದ್ಧಗೊಳಿಸುವಿಕೆ (ಪಿಎಂಎಫ್‌ಎಂಇ) ಯೋಜನೆಯು ಕರ್ನಾಟಕದ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿ-ತ್ವದ ಈ ಯೋಜನೆಯಡಿ, ರಾಜ್ಯ ಸರ್ಕಾರವು ಹೆಚ್ಚುವರಿ ಶೇ.15ರಷ್ಟು ಸಹಾಯಧನ ನೀಡುತ್ತಿದ್ದು, ಕಿರು ಉದ್ದಿಮೆದಾರರಿಗೆ ಶೇ.50ರಷ್ಟು ಅಥವಾ ಗ-ರಿಷ್ಠ ರೂ.15 ಲಕ್ಷ ಸಾಲ ಸಂಪರ್ಕಿತ ಸಹಾಯಧನ ಲಭ್ಯವಾಗುತ್ತಿದೆ. ಇದರಲ್ಲಿ ಕೇಂದ್ರದ ರೂ.6 ಲಕ್ಷ ಹಾಗೂ ರಾಜ್ಯದ ರೂ.9 ಲಕ್ಷ ಸಹಾಯಧನ ಸೇರಿದೆ.

ಈ ಯೋಜನೆಯ ಯಶಸ್ಸಿಗೆ ಕಾರಣರಾದ ಕರ್ನಾಟಕದ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರ ನಾಯಕತ್ವ ಹಾಗೂ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಅವರ ಅವಿರತ ಶ್ರಮವನ್ನು ಉದ್ಯಮಿಗಳು ಮತ್ತು ರೈತರು ವ್ಯಾಪಕವಾಗಿ ಮೆಚ್ಚಿದ್ದಾರೆ. ವಾರ್ಷಿಕ ಸಾಲ ಮಂಜೂರಾತಿಯ ಪ್ರಗತಿ: ಪಿಎಂಎಫ್‌ಎಂಇ ಯೋಜನೆಯಡಿ ಕಳೆದ ಐದು ಸಾಲುಗಳಲ್ಲಿ ಸಹಾಯ ಧನದಡಿಯಲ್ಲಿ ಸಾಲ ಮಂಜೂರಾತಿಯಲ್ಲಿ ಗಣನೀಯ ಏರಿಕೆಯಾಗಿದೆ. 2021-22 ಸಾಲಿನಲ್ಲಿ ಒಟ್ಟು 259 ಸಾಲಗಳು ಮಂಜೂರಾಗಿದ್ದವು, ಇದು 2022-23ರಲ್ಲಿ 1813ಗೆ, 2023-24ರಲ್ಲಿ 1,997ಗೆ, 2024-25ರಲ್ಲಿ 2321ಗೆ ಮತ್ತು 2025-26ರ ಮೊದಲ ತ್ರೈಮಾಸಿಕದಲ್ಲಿ 314 ಹಾಗೂ 2ನೆ ತ್ರೈಮಾಸಿಕದ ಆಗಸ್ಟ್ ಅಂತ್ಯದವರೆಗೆ 390 ಸಾಲಗಳು ಮಂಜೂರಾಗಿವೆ. ಇದು ಗ್ರಾಮೀಣ ಯುವಕ-ಯುವತಿಯರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ವಲಸೆಯನ್ನು ತಡೆಗಟ್ಟಿ, ರೈತರ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ.



ಮಾನ್ಯ ಮುಖ್ಯಮಂತ್ರಿಗಳು 2025-26ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯದಲ್ಲಿ ಹೆಚ್ಚುವರಿ 5000 ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳನ್ನು ಸ್ಥಾಪಿಸುವ ಗುರಿ ಘೋಷಿಸಿದ್ದು, ಇದಕ್ಕಾಗಿ ರೂ.206 ಕೋಟಿ ಅನುದಾನ ಒದಗಿಸಿದ್ದಾರೆ. ಈ ಗುರಿ ಸಾಧನೆಯತ್ತ ರಾಜ್ಯವು ಭರದಿಂದ ಸಾಗುತ್ತಿದ್ದು, ಕೃಷಿ ಸಚಿವ ಚೆಲುವರಾಯಸ್ವಾಮಿ ಅವರ ಮಾರ್ಗದರ್ಶನದಲ್ಲಿ ಕೆಪೆಕ್ ಸಂಸ್ಥೆಯು ಯೋಜನೆಯನ್ನು ಸಮರ್ಥವಾಗಿ ಅನುಷ್ಠಾನಗೊಳಿಸುತ್ತಿದೆ.. ಕೆಪೆಕ್ ಸಂಸ್ಥೆಯು ಯೋಜನೆಯ ರಾಜ್ಯ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಅವರ ನೇತೃತ್ವದಲ್ಲಿ ಅನೇಕ ನವೀನ ಕ್ರಮಗಳನ್ನು ಕೈಗೊಂಡಿದೆ.

ಪ್ರಸ್ತುತ ಆರ್ಥಿಕ ವರ್ಷದ (2025-26) ಪ್ರಾರಂಭದಿಂದಲೂ ಯೋಜನೆಯ ಅನುಷ್ಠಾನವನ್ನು ಚುರುಕುಗೊಳಿಸಲಾಗಿದ್ದು, ಜಿಲ್ಲಾವಾರು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಜಿಲ್ಲಾ ಉಸ್ತುವಾರಿ ಸಚಿವರ ಮುಂದಾಳತ್ವದಲ್ಲಿ ಆಯೋಜಿಸಲಾಗುತ್ತಿದೆ. ಈಗಾಗಲೇ 19 ಜಿಲ್ಲೆಗಳಲ್ಲಿ ಇಂತಹ ಕಾರ್ಯಕ್ರಮಗಳು ನಡೆದಿದ್ದು, ಪ್ರತಿ ಕಾರ್ಯಕ್ರಮದಲ್ಲಿ 300-400 ಸಂಭಾವ್ಯ ಉದ್ದಿಮೆದಾರರು ಮತ್ತು ರೈತರು ಭಾಗವಹಿಸಿ ಅರ್ಜಿ ಸಲ್ಲಿಕೆಗೆ ಮುಂದಾಗಿದ್ದಾರೆ.. ಉದ್ದಿಮೆದಾರರಿಗೆ ಸಹಾಯ ಹಸ್ತ ನೀಡಲು ಕೆಪೆಕ್ ಸಂಸ್ಥೆಯು ಇತ್ತೀಚೆಗೆ 89 ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನು ನೇಮಕ ಮಾಡಿದ್ದು, ಇನ್ನೂ 100 ಜನರ ನೇಮಕ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಸಹಾಯವಾಣಿ ಕೇಂದ್ರ ಸ್ಥಾಪನೆ, ಬ್ಯಾಂಕಿಂಗ್ ಸಲಹಾ ಕೋಶ (3 ನುರಿತ ತಜ್ಞರೊಂದಿಗೆ), ಪರಿಶಿಷ್ಟ ಜಾತಿ/ಪಂಗಡದ ಉದ್ದಿಮೆದಾರರಿಗೆ ವಿಶೇಷ ಅಭಿಯಾನ ಮತ್ತು ಪ್ರತ್ಯೇಕ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಲ್ಲಾ ಪ್ರಮುಖ ಬ್ಯಾಂಕುಗಳ ಉನ್ನತ ಅಧಿಕಾರಿಗಳೊಂದಿಗೆ ಸಭೆಗಳು ನಡೆದಿದ್ದು, ಬ್ಯಾಂಕಿನಲ್ಲಿ ಬಾಕಿ ಇರುವ ಅರ್ಜಿಗಳ ತ್ವರಿತ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ. ಈ ಎಲ್ಲಾ ಪ್ರಯತ್ನಗಳು ಸಿ.ಎನ್. ಶಿವಪ್ರಕಾಶ್ ಅವರ ದೂರದೃಷ್ಟಿ ಮತ್ತು ಸಮರ್ಪಣೆಯ ಫಲವಾಗಿದ್ದು, ಯೋಜನೆಯ ಪ್ರಗತಿಯನ್ನು ದ್ವಿಗುಣಗೊಳಿಸಿದೆ..

# ಡಾ.ರಾಜ್‌ಕುಮಾರ್ ಕಲಾ ಸಂಘದ ನೂತನ ಕಚೇರಿ ಉದ್ಘಾಟನೆ

ಕೆ.ಆರ್.ಪೇಟೆ: ತಾಲ್ಲೂಕು ಡಾ.ರಾಜ್‌ಕುಮಾರ್ ಕಲಾ ಸಂಘದ ನೂತನ ಕಚೇ–ರಿಯನ್ನು ಕರ್ನಾಟಕ ಸರ್ಕಾರದ ನಾಟಕ ಅಕಾಡೆಮೆ ಪ್ರಶಸ್ತಿ ವಿಜೇತರು ಹಾಗೂ ಜೈ ಭುವನೇಶ್ವರಿ ಕಲಾ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಕೆ.ಎನ್.ತಮ್ಮಯ್ಯ ಅವರು ಉದ್ಘಾಟನೆ ಮಾಡಿದರು.

ಬಳಿಕ ಮಾತನಾಡಿದ ಕೆ.ಎನ್. ತಮ್ಮಯ್ಯ ಅವರು ನಮ್ಮ ಕನ್ನಡ ರಂಗಭೂಮಿಯಲ್ಲಿ ಸಾವಿರಾರು ನಾಟಕಗಳಲ್ಲಿ ನಟಿಸಿ, ನಂತರ ಸಿನಿಮಾ ರಂಗದಲ್ಲಿ ಸುಮಾರು 205ಚಲನಚಿತ್ರಗಳಲ್ಲಿ ನಟಿಸಿ ದ್ರುವತಾರೆಯಾಗಿ ಮಿಂಚಿ ಕನ್ನಡಿಗರ ಮನೆ ಮನದಲ್ಲಿ ಶಾಶ್ವತ ಸ್ಥಾನ ಪಡೆದಿರುವ ಡಾ.ರಾಜ್‌ಕುಮಾರ್ ಹೆಸ–ರಿನಲ್ಲಿ ರಾಜ್ಯದಲ್ಲಿ ಲಕ್ಷಾಂತರ ಸಂಘಟನೆಗಳಿವೆ. ಈ ಸಂಘಗಳು ಕಲಾ ಸೇವೆ ಮತ್ತು ಕನ್ನಡ ಸೇವೆಯನ್ನು ಮಾಡುವ ಉದ್ದೇಶವನ್ನು ಹೊಂದಿವೆ. ಅದೇ ರೀತಿ ನಮ್ಮ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಇದೇ ಪ್ರಥಮ ಭಾರಿಗೆ ಯುವ ಕಲಾವಿದರಾದ ಎಲ್.ಐ.ಸಿ ಕುಮಾರ್ ಮತ್ತು ಡ್ರಾಮಾ ಮಾಸ್ಟರ್ ವಿಷಕಂಠ ಅವರ ತಂಡವು ಡಾ.ರಾಜ್‌ಕುಮಾರ್ ಕಲಾ ಸಂಘವನ್ನು ಮಂಡ್ಯ ಜಿಲ್ಲಾ ಸಂಘ ಸಂಸ್ಥೆಗಳ ನೊಂದಣಾಧಿಕಾರಿಗಳ ನೊಂದಾಯಿಸಿ ಸಂಘವನ್ನು ಅಸ್ಥಿತ್ವಕ್ಕೆ ತಂದು ಇಂದು ಕಚೇರಿಯನ್ನು ಅಧಿಕೃತವಾಗಿ ಉದ್ಘಾಟನೆ ಮಾಡಿರುವುದು ಹೆಮ್ಮೆಯ ವಿಚಾರವಾಗಿದೆ.

ಎಷ್ಟೇ ಕಲಾ ಸಂಘಗಳು ಆರಂಭವಾದರೂ ಎಲ್ಲಾ ಸಂಘಗಳ ಉದ್ದೇಶ ಒಂದೇ ಆಗಿರುತ್ತದೆ. ಕಲೆಯನ್ನು ಉಳಿಸುವುದು. ಕಲಾವಿದರನ್ನು ಬೆಳಕಿಗೆ ತರುವುದು. ಕಲಾವಿದರಿಗೆ ವೇದಿಕೆ ಸೃಷ್ಠಿಸಿಕೊಡುವುದು. ಕಲಾ ಕಲಾರಸಿಕರಿಗೆ ನಾಟಕ ಪ್ರದರ್ಶನದ ಮೂಲಕ ರಸದೌತಣ ನೀಡುವುದು ನಮ್ಮ ಕಲಾ ಸಂಘಗಳ ಉದ್ದೇಶವಾಗಿದೆ. ಸರ್ಕಾರವು ಕಲಾ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯನ್ನು ಜಾ–ರಿಗೆ ತರಬೇಕು. ಈ ಮೂಲಕ ನಾಟಕದ ಮೂಲಕ ಕನ್ನಡ ಭಾಷೆ ಮತ್ತು ಸಂಸ್ಕೃತಿ ಪರಂಪರೆಯನ್ನು ಉಳಿಸುತ್ತಿರುವ ಕಲಾವಿದರನ್ನು ಪ್ರೋತ್ಸಾಹಿಸಬೇಕು.



ಈ ಮೂಲಕ ನಾಟಕ ಕಲೆಯನ್ನು ಉಳಿಸಲು ಮುಂದಾಗಬೇಕು ಎಂದು ಸರ್ಕಾರವನ್ನು ಕೆ. ಎನ್.ತಮ್ಮಯ್ಯ ಒತ್ತಾಯ ಮಾಡಿದರು. ತಾಲ್ಲೂಕು ಡಾ.ರಾಜ್‌ಕುಮಾರ್ ಕಲಾ ಸಂಘದ ಅಧ್ಯಕ್ಷ ಪಿ.ಬಿ.ಮಂಚನಹಳ್ಳಿ ಎಲ್.ಐ.ಸಿ ಕುಮಾರ್ ಮಾತನಾಡಿ ಕಳೆದ 18ವರ್ಷಗಳಿಂದ ತಾಲ್ಲೂಕಿನಲ್ಲಿ ವಿವಿಧ ಕಲಾ ಸಂಘಗಳ ಮೂಲಕ ಕಲಾದೇವಿಯ ಸೇವೆ ಮಾಡಿ, ಈಗ ಅಧಿಕೃತವಾಗಿ ಡಾ.ರಾಜ್‌ಕುಮಾರ್ ಕಲಾ ಸಂಘವನ್ನು ಅಧಿಕೃತವಾಗಿ ನೊಂದಾಯಿಸಿ ಇಂದು ತಾಲ್ಲೂಕಿನ ಹಿರಿಯ ಕಲಾವಿದರ ಸಮ್ಮುಖದಲ್ಲಿ ಕಚೇರಿಯನ್ನು ಉದ್ಘಾಟನೆ ಮಾಡಿದ್ದೇವೆ.

ಸಂಘವು ತಾಲ್ಲೂಕಿನ ಸಮಸ್ತ ರಂಗಭೂಮಿ ಕಲಾವಿದರಿಗೆ ಸೇರಿದ ಆಸ್ತಿಯಾಗಿದೆ ಎಲ್ಲರೂ ನಮ್ಮ ಸಂಘದ ಸದಸ್ಯರಾಗುವ ಮೂಲಕ ಸಂಘವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳೆಸಬೇಕು ಎಂದು ಮನವಿ ಮಾಡಿದರು. ಕಲಾ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಜೈ ಭುವನೇಶ್ವರಿ ಕಲಾ ಸಂಘದ ಅಧ್ಯಕ್ಷ ಕೆ.ಎನ್.ತಮ್ಮಯ್ಯ, ಉಪಾಧ್ಯಕ್ಷ ಚಟ್ಟೇನಹಳ್ಳಿ ನಾಗರಾಜು, ಹಿರಿಯ ರಂಗಭೂಮಿ ಕಲಾವಿದರಾದ ಬೊಮ್ಮನಾಯಕನಹಳ್ಳಿ ಮಹಾದೇವೇಗೌಡ, ಹರಿಹರಪುರ ಮಹಾದೇವಣ್ಣ, ಬಳ್ಳೇಕೆರೆ ನಾಗರಾಜು, ಶಂಕರೇಗೌಡ, ಅಂಚನಹಳ್ಳಿ ಪುಟ್ಟಸ್ವಾಮಿ, ಸುರೇಶ್ ಹರಿಜನ,ಯಡಹಳ್ಳಿಪರಮೇಶ್, ಶ್ರೀರಾಮಾಂಜನೇಯ ಕಲಾ ಸಂಘದ ಅಧ್ಯಕ್ಷ ಕಾಳಯ್ಯ, ಕಟ್ಟಹಳ್ಳಿ ನಿಂಗಪ್ಪ, ಡಾ.ಬಿ.ಆರ್.ಅಂಬೇಡ್ಕರ್ ಕಲಾ ಸಂಘದ ಅಧ್ಯಕ್ಷ ಸುನಿಲ್‌ಕುಮಾರ್, ಡಾ.ಬಾಬು ಜಗಜೀವನರಾಂ ಕಲಾ ಸಂಘದ ಅಧ್ಯಕ್ಷ ಹೊಸಹೊಳಲು ದೇವರಾಜು, ಡಾ.ರಾಜ್‌ಕುಮಾರ್ ಕಲಾ ಸಂಘದ ಕಾರ್ಯದರ್ಶಿ ಮೋದೂರು ಎಂ.ಎಸ್.ಪಾಲಾಕ್ಷ, ಉಪಾಧ್ಯಕ್ಷರಾಗಿ ಮರಡಹಳ್ಳಿ ಎಂ.ನಟರಾಜು, ಖಜಾಂಚಿ ಶೆಟ್ಟಿಹಳ್ಳಿ ರಾಜು, ಸಂಘಟನಾ ಕಾರ್ಯದರ್ಶಿ ಕುರುಬಹಳ್ಳಿ ಗೋಪಾಲ್, ನಿರ್ದೇಶಕರಾದ ಚಿಕ್ಕಗಾಡಿಗನಹಳ್ಳಿ ವಿಷಕಂಠ, ಅಂಚೆಮುದ್ದನಹಳ್ಳಿ ನವೀನ್, ಪಿ.ಬಿ.ಮಂಚನಹಳ್ಳಿ ಎಂ.ಬಿ.ದೇವರಾಜು, ಪಟ್ಟಣದ ಬಿ.ಎಲ್.ನಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ಚಿತ್ರಶೀರ್ಷಿಕೆ:04ಕೆ.ಆರ್.ಪಿ–01:ಕೆ.ಆರ್.ಪೇಟೆ: ತಾಲ್ಲೂಕು ಡಾ.ರಾಜ್‌ಕುಮಾರ್ ಕಲಾ ಸಂಘದ(ರಿ) ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕ ಸರ್ಕಾರದ ನಾಟಕ ಅಕಾಡೆಮೆ ಪ್ರಶಸ್ತಿ ವಿಜೇತರು ಹಾಗೂ ಜೈ ಭುವನೇಶ್ವರಿ ಕಲಾ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಕೆ.ಎನ್.ತಮ್ಮಯ್ಯ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ತಾಲ್ಲೂಕು ಡಾ.ರಾಜ್‌ಕುಮಾರ್ ಕಲಾ ಸಂಘದ ಅಧ್ಯಕ್ಷ ಪಿ.ಬಿ.ಮಂಚನಹಳ್ಳಿ ಇತರರು ಇದ್ದರು.

# ಪ್ರವಾಹಕ್ಕೆ ಸಿಲುಕಿದ್ದ ಹಸುಗಳನ್ನು ರಕ್ಷಿಸಿದ ಅಗ್ನಿಶಾಮಕ ಸಿಬ್ಬಂದಿಗಳು

ಕೃಷ್ಣರಾಜಪೇಟೆ: ತಾಲೂಕಿನ ಬಂಡೀಹೊಳೆ ಗ್ರಾಮದ ಬಳಿ ಹೇಮಾವತಿ ನದಿ ಮಧ್ಯ ಪ್ರವಾಹಕ್ಕೆ ಸಿಲುಕಿದ್ದ ಎರಡು ಹಸುಗಳನ್ನು ಸಾಹಸ ಕಾರ್ಯಾಚರಣೆಯ ಮೂಲಕ ಅಗ್ನಿ ಶಾಮಕ ಇಲಾಖೆಯ ಸಿಬ್ಬಂಧಿಗಳು ಸುರಕ್ಷಿತವಾಗಿ ರಕ್ಷಿಸಿ ಜನಮೆಚ್ಚುಗೆಗೆ ಪಾತ್ರರಾಗಿದ್ದಾರೆ.



ಬಂಡಿಹೊಳೆ ಗ್ರಾಮದ ಸಿದ್ದೇಗೌಡರ ಮಗ ಹರೀಶ ಎನ್ನುವವರು ತಮ್ಮ ಎರಡು ಹಸುಗಳನ್ನು ಹೇಮಾವತಿ ನದಿ ನಡುವೆ ಇರುವ ಇರುವ ಖಾಲಿ ಜಾಗದಲ್ಲಿ ಎಂದಿನಂತೆ ಮೇಯಲು ಬಿಟ್ಟಿದ್ದರು. ನದಿ ಒಳಗಿನ ಖಾಲಿ ಜಾಗದಲ್ಲಿ ಸಂವೃದ್ದ ಮೇವು ದೊರಕುವುದರಿಂದ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆಯಿದ್ದಾಗ ನದಿ ಸೇತುವೆ ಕೆಳಗಿನ ನದಿಯೊಳಗಿನ ಖಾಲಿ ಬಯಲಿನಲ್ಲಿ ಇಲ್ಲಿನ ಜನ ಸಾಮಾನ್ಯವಾಗಿ ತಮ್ಮ ಹಸುಗಳನ್ನು ಮೇಯಲು ಬಿಡುತ್ತಾರೆ.

ಯಾವುದೇ ಪೂರ್ವ ಸೂಚನೆಯಿಲ್ಲದೆ ಹಾಸನ ಜಿಲ್ಲೆಯ ಗೊರೂ–ರಿನ ಹೇಮಾವತಿ ಜಲಾಶಯದಿಂದ ಅಧಿಕ ನೀರು ಬಿಟ್ಟ ಪರಿಣಾಮ ನದಿ ಮಧ್ಯದ ಖಾಲಿ ಜಾಗವನ್ನು ಬಿಟ್ಟು ಸುತ್ತಲೂ ಪ್ರವಾಹದ ರೀತಿ ನೀರು ಆವರಿಸಿತು. ನೀರಿನ ಪ್ರಮಾಣ ಹೆಚ್ಚಾದ ಪರಿಣಾಮ ಮೇಯುತ್ತಿದ್ದ ಹಸುಗಳು ನದಿಯ ನಡುವೆ ಸಿಲುಕಿ ಹೊರಬರಲಾಗದೆ ಚಡಪಡಿಸುತ್ತಿದ್ದವು. ನದಿಯಲ್ಲಿನ ನೀರಿನ ಪ್ರಮಾಣ ಹೆಚ್ಚಿ ಹಸುಗಳು ಅಪಾಯಕ್ಕೆ ಸಿಲುಕುತ್ತಿರುವುದನ್ನು ಮನಗಂಡ ಹಸುಗಳ ಮಾಲೀಕ ಹರೀಶ್ ಅಗ್ನಿ ಶಾಮಕ ಠಾಣೆಗೆ ಸುದ್ದಿ ಮುಟ್ಟಿಸಿ ಸಹಾಯಕ್ಕೆ ಯಾಚಿಸಿದರು. ತಕ್ಷಣವೇ ಸ್ಥಳಕ್ಕೆ ಆಗಮಿಸಿ ಬೃಹತ್ ಕ್ರೇನ್ ಮೂಲಕ ಕಾರ್ಯಚರಣೆ ಆರಂಭಿಸಿದ ಅಗ್ನಿ ಶಾಮಕ ಸಿಬ್ಬಂಧಿಗಳು ನದಿಯೊಳಗೆ ಇಳಿದು ಸುರಕ್ಷತಾ ಹಗ್ಗ ಬಳಸಿ ಕ್ರೇನ್ ಮೂಲಕ ಸುರಕ್ಷಿತವಾಗಿ ಮೇಲೆತ್ತಿ ಹಸುಗಳ ಜೀವ ರಕ್ಷಿಸಿದರು.

ಕಾರ್ಯಾಚರಣೆಯ ವೇಳೆ ಬಂಡಿಹೊಳೆ ಹಾಗೂ ಸುತ್ತಮುತ್ತಲ ನೂರಾರು ಜನ ಸ್ಥಳದಲ್ಲಿದ್ದು ಸಾಹಾಸ ಕಾರ್ಯಾಚರಣೆಯನ್ನು ವೀಕ್ಷಿಸಿ ಅಗ್ನಿ ಶಾಮಕ ಸಿಬ್ಬಂಧಿಗಳನ್ನು ಅಭಿನಂಧಿಸಿದರು. ಅಗ್ನಿ ಶಾಮಕ ಠಾಣೆಯ ಸಿಬ್ಬಂಧಿಗಳಾದ ದಿನೇಶ್, ಪ್ರದೀಪ್ ಕುಮಾರ್, ಸಚಿನ್, ಪ್ರತಾಪ, ಚಂದನ್, ಅಶೋಕ್, ಶ್ರೀಧರ್, ಯಮನಪ್ಪ, ಓಂಕಾರ ಮತ್ತು ಮೌನೇಶ್ ಕಾರ್ಯಾಚರಣೆಯಲ್ಲಿದ್ದು ಸಾರ್ವಜನಿಕರ ಅಭಿನಂಧನೆಗೆ ಪಾತ್ರರಾದರು.

## ಸರ್ಕಾರದಿಂದ ಪರಿಶಿಷ್ಟರ ಹಣ ದುರ್ಬಳಕೆ :ಅಶೋಕ್ ವಾಗ್ದಾಳಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರೇ, ತಾವು ಮತ್ತು ತಮ ಪಟಾಲಂ ಇನ್ನು ಮುಂದೆ ಎಂದಿಗೂ ಸಾಮಾಜಿಕ ನ್ಯಾಯದ ಬಗ್ಗೆ ಬುರುಡೆ ಭಾಷಣ ಮಾಡಿ ಬುದ್ಧ, ಬಸವ, ಅಂಬೇಡ್ಕರರಿಗೆ ಅವಮಾನ ಮಾಡಬೇಡಿ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸರ್ಕಾರದ ವಿರುದ್ದ ವಾಗ್ದಾಳಿ ನಡೆಸಿದ್ದಾರೆ. ಈ ಕುರಿತು ತಮ ಅಧಿಕೃತ ಸಾಮಾಜಿಕ ಜಾಲ ತಾಣ ಎಕ್?ಸನಲ್ಲಿ ಪೋಸ್ಟ್ ಮಾಡಿರುವ ಅವರು, ದಲಿತರು, ಹಿಂದುಳಿದ ವರ್ಗಗಳ ಜನರನ್ನು ವೋಟ್ ಬ್ಯಾಂಕ್ ಮಾಡಿಕೊಂಡು ಮೋಸ ಮಾಡಬೇಡಿ ಎಂದು ಕಿಡಿಕಾ–ರಿದ್ದಾರೆ.



ಒಂದು ಕಡೆ ಹಿಂದುಳಿದ ವರ್ಗಗಳ ವಿವಿಧ ಅಭಿವೃದ್ಧಿ ನಿಗಮಗಳಿಗೆ ನೂರಾರು ಕೋಟಿ ಅನುದಾನ ಕಡಿತ ಮಾಡಿದ್ದೀರಿ, ಮತ್ತೊಂದು ಕಡೆ ಮೀಸಲಿಟ್ಟಿರುವ ಹಣವನ್ನು ಸರಿಯಾಗಿ ಖರ್ಚು ಮಾಡಿಲ್ಲ. ಇದೇನಾ ಸ್ವಾಮಿ ನಿಮ ಸಾಮಾಜಿಕ ನ್ಯಾಯ? ಕಾಂಗ್ರೆಸ್ ಸರ್ಕಾರಕ್ಕೆ ನಾಚಿಕೆಯಾಗಬೇಕು ಎಂದು ಆಕ್ರೋಶ ಹೊರಹಾಕಿದ್ದಾರೆ. ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ವಿನಿಯೋಗವಾಗಬೇಕಾಗಿದ್ದ ವಾಲೀಕಿ ಅಭಿವೃದ್ಧಿ ನಿಗಮದ 187 ಕೋಟಿ ಹಣವನ್ನ ಲಪಟಾಯಿಸಿದ್ದಾಯ್ತು. ಎಸ್‌ಸಿ–ಎಸ್‌ಪಿ–ಟಿಎಸ್‌ಪಿ ಹಣದಲ್ಲಿ ಪ್ರತಿ ವರ್ಷ ಬರೋಬ್ಬರಿ 15 ಸಾವಿರ ಕೋಟಿ ರೂಪಾಯಿ ಹಣವನ್ನ ಬೇರೆಡೆ ವರ್ಗಾಯಿಸಿ ದುರ್ಬಳಕೆ ಮಾಡಿದ್ದಾಯ್ತು.

ಈಗ ಹಿಂದುಳಿದ ಸಮುದಾಯಗಳ ಅಭಿವೃದ್ಧಿ ನಿಗಮಗಳ ಅಹಿಂದ ನಿಗಮಗಳ ಅನುದಾನ ಖೋತಾ, ಡೋಂಗಿ ಸಮಾಜವಾದಿಗಳ ಸಾಮಾಜಿಕ ನ್ಯಾಯ ಭಾಷಣಕ್ಕೆ ಮಾತ್ರ ಸೀಮಿತ! ಸಿಎಂ ಸಿದ್ದರಾಮಯ್ಯನವರೇ, ತಮ ಸರ್ಕಾರ ಬಂದಾಗಿನಿಂದ ಕಳೆದ ಎರಡು ವರ್ಷಗಳಲ್ಲಿ ಹಿಂದುಳಿದ ಸಮುದಾಯಗಳಿಗೆ ಮಾಡಿರುವ ದೊಡ್ಡ ಉಪಕಾರದ ಬಗ್ಗೆ ಓದಿಕೊಳ್ಳಿ ಎಂದು ವ್ಯಂಗ್ಯವಾಡಿದ್ದಾರೆ.

ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅನುದಾನದಲ್ಲಿ 90 ಕೋಟಿ ರೂ. ಅನುದಾನ ಕಡಿತ, ವಿಶ್ವಕರ್ಮ ನಿಗಮಕ್ಕೆ 12 ಕೋಟಿ ಅನುದಾನ ಕಡಿತ, ಉಪ್ಪಾರ ನಿಗಮಕ್ಕೆ 7 ಕೋಟಿ ಅನುದಾನ ಕಡಿತ, ಅಂಬಿಗರ ಚೌಡಯ್ಯ ನಿಗಮಕ್ಕೆ 16 ಕೋಟಿ ರೂ. ಕಡಿತ, ಸವಿತಾ ಸಮಾಜಕ್ಕೆ 5 ಕೋಟಿ ಅನುದಾನ ಕಡಿತ ನೋಡಿದರೆ ಪ್ರತಿ ವರ್ಷ ನೂರಾರು ಕೋಟಿ ಅನುದಾನ ಕಡಿತವಾಗಿದೆ ಎಂದು ಅವರು ಸರ್ಕಾರದ ಗಮನಸೆಳೆದಿದ್ದಾರೆ.

## ಪತ್ನಿಯ ಖಾಸಗಿ ಫೋಟೋಗಳನ್ನು ವೈರಲ್ ಮಾಡಿದ ಪತಿ

### ವರದಕ್ಷಿಣೆ ಹಣ ತರಲಿಲ್ಲ ಎಂದು ಫೋಟೋ ವೈರಲ್

ಬೆಂಗಳೂರು: ನಗರದಲ್ಲಿ ಅತೀ ನಾಚಿಕೆಗೇಡಿತನದ ಹಾಗೂ ಹೃದಯ ಕಲುಕುವಂತಹ ಘಟನೆ ಬೆಳಕಿಗೆ ಬಂದಿದೆ. ಪತ್ನಿಯನ್ನೇ ಕಿರುಕುಳ ನೀಡಿ ಅವಮಾನಿಸಲು ಪತಿಯೊಬ್ಬನು ನೇರವಾಗಿ ಸಾಮಾಜಿಕ ಜಾಲತಾಣವನ್ನು ಆಯ್ಕೆ ಮಾಡಿಕೊಂಡಿದ್ದಾನೆ. ತನ್ನ ಕುಟುಂಬದಿಂದ ಕೋಟ್ಯಂತರ ರೂಪಾಯಿಗಳ ವರದಕ್ಷಿಣೆ ತ–ರಿಸಿಕೊಡಬೇಕು ಎಂದು ಒತ್ತಡ ಹೇರಿದ ಪತಿ, ಬೇಡಿಕೆ ಈಡೇರದಿದ್ದಾಗ, ಪತ್ನಿಯ ಖಾಸಗಿ ಫೋಟೋಗಳನ್ನು ವಾಟ್ಸಾಪ್ ಗ್ರೂಪ್‌ಗಳಲ್ಲಿ ಹಂಚಿಕೊಂಡು ಮಾನಸಿಕ ಹಿಂಸೆಗೊಳಪಡಿಸಿದ್ದಾನೆ.




ಹಿನ್ನಲೆ: ಈ ದಂಪತಿಗಳು ಮೂಲತಃ ರಾಜಸ್ಥಾನದ ಬಲೋತ್ರ ಜಿಲ್ಲೆಯಿಂದ ಬೆಂಗಳೂರಿಗೆ ಬಂದು ವಾಸವಾಗಿದ್ದಾರೆ. ಆತನ ಪತ್ನಿಯ ಕುಟುಂಬದಿಂದ ಹೆಚ್ಚಿನ ವರದಕ್ಷಿಣೆಯನ್ನು ಪಡೆದು, ತನ್ನ ವಂದೇಮಾತರಂ ಎಂಬ ಸ್ವಂತ ವ್ಯವಹಾರ ವಿಸ್ತರಿಸಬೇಕೆಂಬ ಪತಿಯ ಉದ್ದೇಶವಿತ್ತು. ಆರೋಪಿಯು ಅತೀ ಭಾರೀ ಮೊತ್ತವಾದ ?4 ಕೋಟಿ ವರದಕ್ಷಿಣೆ ಪತ್ನಿಯ ಕುಟುಂಬದಿಂದ ತರಬೇಕೆಂದು ಒತ್ತಾಯಿಸಿದ್ದಾನೆ. ಆದರೆ, ಆಕೆಯ ಕುಟುಂಬವು ಆರ್ಥಿಕವಾಗಿ ಇಷ್ಟು ದೊಡ್ಡ ಮೊತ್ತವನ್ನು ಒದಗಿಸಲು ಸಾಧ್ಯವಾಗದಿದ್ದಾಗ, ಪತಿ ಅಮಾನವೀಯ ಮಾರ್ಗವನ್ನು ಅನುಸ–ರಿಸಿದ್ದಾನೆ.

ಖಾಸಗಿ ಫೋಟೋಗಳ: ಬೇಡಿಕೆ ಈಡೇರದ ಹಿನ್ನೆಲೆಯಲ್ಲಿ, ಪತಿ ತನ್ನ ಪತ್ನಿಯ ಖಾಸಗಿ ಹಾಗೂ ವೈಯಕ್ತಿಕ ಫೋಟೋಗಳನ್ನು ಕೇವಲ ಸಂಗ್ರಹಿಸಿಕೊಳ್ಳುವುದಷ್ಟೇ ಅಲ್ಲದೆ, ನೇರವಾಗಿ ವಾಟ್ಸಾಪ್ ಗ್ರೂಪ್‌ಗಳಲ್ಲಿ ಹಂಚಿಕೊಂಡಿದ್ದಾನೆ. ಈ ವಿಷಯವನ್ನು ಸಂತ್ರಸ್ತೆ ಪತ್ನಿಯವರಿಗೆ ಮೊದಲಿಗೆ ಅವರ ಸಂಬಂಧಿಕರು ತಿಳಿಸಿ ಬೆಚ್ಚಿಬೀಳುವಂತಾಗಿ–ತ್ತು. ಪತಿಯ ನಡೆ ತನ್ನ ವ್ಯಕ್ತಿತ್ವ, ಗೌರವ ಮತ್ತು ಬದುಕಿನ ಮೇಲೆ ಆಘಾತ ಬೀರಿದೆ ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ದೈಹಿಕ ಹಲ್ಲೆಗೂ ಒಳಗಾದ ಪತ್ನಿ: ಸಂತ್ರಸ್ತೆ ಈ ಬಗ್ಗೆ ತನ್ನ ಪತಿಯನ್ನು ಪ್ರಶ್ನಿಸಿದಾಗ, ಪತಿಯು ಪಶ್ಚಾತ್ತಾಪ ತೋರಿಸದೇ, ಬದಲಿಗೆ ಆಕೆಯ ಮೇಲೆಯೇ ದೈಹಿಕ ಹಲ್ಲೆ ನಡೆಸಿದ್ದಾನೆ ಎಂಬುದೂ ದೂರಿನಲ್ಲಿ ದಾಖಲಾಗಿದೆ.

ಹೀಗಾಗಿ ಆಕೆ ಎದುರಿಸುತ್ತಿದ್ದ ಕಿರುಕುಳವು ಕೇವಲ ಮಾನಸಿಕ, ಸಾಮಾಜಿಕ ಅವಮಾನವಷ್ಟೇ ಅಲ್ಲದೆ ದೈಹಿಕ ಹಿಂಸೆಯೂ ಆಗಿದೆ ಎಂಬುದು ಸ್ಪಷ್ಟವಾಗಿದೆ.ಎಲ್ಲಾ ಬಗೆಯ ಹಿಂಸೆಗಳಿಂದ ಕಂಗೆಟ್ಟ ಮಹಿಳೆ ಕೊನೆಗೆ ಧೈರ್ಯ ತೋರಿಸಿ, ಬೆಂಗಳೂರು ಪಶ್ಚಿಮ ವಿಭಾಗದ ಮಹಿಳಾ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾಳೆ. ಆಧಾರದ ಮೇಲೆ, ಪೊಲೀಸರು ತಕ್ಷಣ ಆರೋಪಿಯಾದ ಪತಿಯ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಪ್ರಸ್ತುತ ಪ್ರಕರಣದ ತನಿಖೆ ಚುರುಕುಗೊಂಡಿದ್ದು, ಆರೋಪಿಯನ್ನು ಬೇಗನೇ ವಿಚಾರಣೆಗೆ ಒಳಪಡಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವೈವಾಹಿಕ ಜೀವನವನ್ನು ಕಾಪಾಡಬೇಕಾದ ಪತಿ ತನ್ನ ಸ್ವಾರ್ಥಕ್ಕಾಗಿ ವರದಕ್ಷಿಣೆ ಒತ್ತಾಯಿಸಿ, ಪತ್ನಿಯ ಮಾನವೀಯ ಹಕ್ಕುಗಳನ್ನು ತುಳಿದಿರುವುದು ಸಮಾಜಕ್ಕೆ ಗಂಭೀರ ಎಚ್ಚರಿಕೆಯಾಗಿದೆ. ಕಾನೂನು ತನ್ನ ಹಾದಿಯಲ್ಲಿ ನಡೆದು, ಇಂತಹ ವರ್ತನೆಗೆ ಕಟ್ಟುನಿಟ್ಟಿನ ಶಿಕ್ಷೆ ವಿಧಿಸುವ ನಿರೀಕ್ಷೆಯಿದೆ.

## ನೆಲಮಂಗಲದಲ್ಲಿ ಕಾರು ಕಳ್ಳರ ಜಾಲ ಬಯಲು ನಾಲ್ವರು ಪೊಲೀಸರ ಬಲೆಗೆ

### ಫೋಟೋ ತೆಗೆದರೆ ನ್ಯಾಯಾಧೀಶರಿಗೆ ಹೇಳುತ್ತೇವೆ ಎಂದು ಬೆದರಿಕೆ

ನೆಲಮಂಗಲ: ಕಾರು ಕದಿಯುತ್ತಿದ್ದ ನಾಲ್ವರು ಖತರ್ನಾಕ್ ಕಾರು ಕಳ್ಳರನ್ನು ಪೊಲೀಸರು ಪತ್ತೆಹಚ್ಚಿ ಬಂಧಿಸಿದ್ದಾರೆ. ಈ ಘಟನೆಯು ಸ್ಥಳೀಯವಾಗಿ ಮಾತ್ರವಲ್ಲದೆ ರಾಜ್ಯದ ಹಲವೆಡೆ ಪ್ರಕರಣಗಳಲ್ಲಿ ಸಿಲುಕಿರುವ ಕಳ್ಳರ ಜಾಲ ಬಯಲಾಗಲು ಕಾರಣವಾಗಿದೆ. ಬಂಧಿತರನ್ನು ನ್ಯಾಯಾಲಯಕ್ಕೆ ಕರೆತರಲಾಗುತ್ತಿರುವ ವೇಳೆ ಘಟನೆ ಮತ್ತಷ್ಟು ಕುತೂಹಲ ಹುಟ್ಟಿಸಿತು. ಅಂದರೆ, ಸ್ಥಳಕ್ಕೆ ಆಗಮಿಸಿದ್ದ ಪತ್ರಿಕಾ ಪ್ರತಿನಿಧಿಗಳು ಆರೋಪಿಗಳ ದೃಶ್ಯ ಹಾಗೂ ಚಿತ್ರಗಳನ್ನು ಸೆರೆಹಿಡಿಯಲು ಯತ್ನಿಸಿದಾಗ, ಆರೋಪಿಗಳು ಮಾಧ್ಯಮದವರಿಗೆ ನೇರವಾಗಿ ಬೆದರಿಕೆ ಹಾಕಿದರು.



"ನಮ್ಮ ಫೋಟೋ ತೆಗೆದ್ರೆ, ವಿಡಿಯೋ ಮಾಡಿದ್ರೆ, ಜಡ್ಜ್‌ಗೆ ಹೇಳುತ್ತೇವೆ" ಎಂದು ಸಿಡಿದಾಡಿದರು. ಆದರೆ ಮಾಧ್ಯಮದವರು ಹಿಂಜರಿಯದೆ ತಮ್ಮ ಕರ್ತವ್ಯವನ್ನು ನಿರ್ವಹಿಸಿ ಆರೋಪಿಗಳ ಫೋಟೋ ಹಾಗೂ ವಿಡಿಯೋಗಳನ್ನು ದೃಢವಾಗಿ ದಾಖಲಿಸಿದರು. ಘಟನೆ ಹಿನ್ನಲೆ: ಆಗಸ್ಟ್ 16 ರಂದು ನೆಲಮಂಗಲದ ನಿವಾಸಿ ದಿನೇಶ್ ಅವರ ಕಾರು ಕದ್ದ ಘಟನೆ ಈ ಬಂಧನಕ್ಕೆ ಮೂಲ ಕಾರಣವಾಗಿದೆ. ಪ್ರಕರಣ ದಾಖಲಾಗುತ್ತಿದ್ದಂತೆಯೇ ಪೊಲೀಸರು ತನಿಖೆ ಕೈಗೊಂಡು, ಶೋಧ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾದರು. ತನಿಖೆಯಲ್ಲಿ ಆಘಾತಕರ ವಿಷಯಗಳು ಬೆಳಕಿಗೆ ಬಂದಿವೆ. ಈ ಬಂಧಿತ ಕಾರು ಕಳ್ಳರ ವಿರುದ್ಧ ಮಂಡ್ಯ, ಕುದೂರು, ಮಾಗಡಿ, ಮೈಸೂರು, ಉತ್ತರ ಕನ್ನಡ, ತಾವರೆಕೆರೆ ಸೇರಿದಂತೆ ರಾಜ್ಯದ ಅನೇಕ ಠಾಣೆಗಳಲ್ಲಿ ಈಗಾಗಲೇ ಪ್ರಕರಣಗಳು ದಾಖಲಾಗಿವೆ.

ಅಂದರೆ, ಬಂಧಿತರು ಹಲವು ವರ್ಷಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾರು ಕದಿಯುವ ಸರಣಿ ಕಳ್ಳತನಗಳಲ್ಲಿ ತೊಡಗಿಕೊಂಡಿರುವುದು ಸ್ಪಷ್ಟವಾಗಿದೆ.

ಜಪ್ತಿ ಮತ್ತು ಆರೋಪಿಗಳ ವಿವರ: ಪೊಲೀಸರು ಬಂಧಿತ–ರಿಂದ ಸುಮಾರು ?3 ಲಕ್ಷ ಮೌಲ್ಯದ ಕಾರು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ. ಬಂಧಿತ ಆರೋಪಿಗಳನ್ನು ರಕ್ಷಿತ್ (25), ದರ್ಶನ್ (20), ಸೂರ್ಯ (25), ಸಾದಿಕ್ (27) ಎಂದು ಗುರುತಿಸಲಾಗಿದ್ದು, ಈ ನಾಲ್ವರೂ ಸೇ–ರಿಕೊಂಡು ಸಂಘಟಿತ ರೀತಿಯಲ್ಲಿ ಕಾರು ಕಳ್ಳತನ ನಡೆಸುತ್ತಿದ್ದರು ಎಂದು ಪೊಲೀಸರು ಶಂಕಿಸಿದ್ದಾರೆ. ಅವರ ವಿರುದ್ಧ ಇನ್ನೂ ಹೆಚ್ಚಿನ ಪ್ರಕರಣಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ. ನೆಲಮಂಗಲದಲ್ಲಿ ನಡೆದಿದ್ದ ಕಾರು ಕಳ್ಳತನ ಪ್ರಕರಣ ಈಗ ರಾಜ್ಯವ್ಯಾಪಿ ಅಪರಾಧ ಜಾಲವನ್ನು ಬಹಿರಂಗಪಡಿಸಿದೆ. ಮಾಧ್ಯಮದವರನ್ನು ಬೆದರಿಸಿ ನ್ಯಾಯಾಲಯದ ಹೆಸರನ್ನು ದುರುಪಯೋಗಪಡಿಸಿಕೊಂಡರೂ, ಕಾನೂನು ಕೈಬೀಸದೆ ನಿಲ್ಲಲಿದೆ ಎಂಬುದು ಖಚಿತ. ಪೊಲೀಸರು ಬಂಧಿತರಿಂದ ಇನ್ನಷ್ಟು ಮಾಹಿತಿಗಳನ್ನು ಕಲೆಹಾಕುತ್ತಿದ್ದಾರೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.